# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :: 355(317)
ಸದಸ್ಯರ ಹೆಸರು :: ಶ್ರೀ ಚಿದಾನಂದ್ ಎಂ.ಗೌಡ
ಉತ್ತರಿಸುವ ದಿನಾಂಕ :: 15.12.2021
ಉತ್ತರಿಸುವ ಸಚಿವರು :: ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ 1979-80 ರಲ್ಲಿ (MR ಸಂಖ್ಯೆ 09/79-80) ವರ್ಗಾಯಿಸಿದ್ದ ಕಳ್ಳಂಬೆಳ್ಳ ಹೋಬಳಿಯ ಹುಂಜನಾಳು, ಸಿಬಿ ಹಾಗೂ ಬೋರಸಂದ್ರ ಸರ್ವೆ ನಂಬರುಗಳನ್ನು ಕಂದಾಯ ಇಲಾಖೆಗೆ ವಾಪಸ್ ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಖಅ 106 ಐಉಕ 88, ದಿನಾಂಕ:01-01-1996ರನ್ವಯ ಕಂದಾಯ ಇಲಾಖೆಗೆ ವಾಪಸ್ ಪಡೆಯಲು ಏನು ಕ್ರಮ ವಹಿಸಲಾಗುವುದು ಹಾಗೂ ಎಷ್ಟು ದಿನ ಬೇಕಾಗುವುದು: | ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ 1979-80ರಲ್ಲಿ ಶಿರಾ ತಾಲ್ಲೂಕು, ಕಳ್ಳಂಬೆಳ್ಳ ಹೋಬಳಿ, ಹುಂಜನಾಳು, ಸಿಬಿ ಮತ್ತು ಬೋರಸಂದ್ರ ಗ್ರಾಮಗಳಲ್ಲಿ ಯಾವುದೇ ಜಮೀನು ವರ್ಗಾಯಿಸಿರುವುದಿಲ್ಲ.<br><br>ಶಿರಾ ತಾಲ್ಲೂಕು, ಕಳ್ಳಂಬೆಳ್ಳ ಹೋಬಳಿ, ಹುಂಜನಾಳು, ಸಿಬಿ ಮತ್ತು ಬೋರಸಂದ್ರ ಗ್ರಾಮಗಳ MR ಸಂಖ್ಯೆ 09/79-80 ಶಿಥಿಲವಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಖಅ 106 ಐಉಕ 88, ದಿನಾಂಕ:01-01-1996ರ ಆದೇಶದ ಪ್ರತಿ ಲಭ್ಯವಾಗಿರುವುದಿಲ್ಲ. |
| ಆ) | ಕಳ್ಳಂಬೆಳ್ಳ ಹೋಬಳಿಯ ಹುಂಜನಾಳು, ಸಿಬಿ ಹಾಗೂ ಬೋರಸಂದ್ರ ಸರ್ವೆ ನಂಬರುಗಳಲ್ಲಿನ 4(1)ಎ ನೋಟೀಸ್ ರದ್ದು ಮಾಡಲು ಕೈಗೊಳ್ಳಲಾಗುವ ಕ್ರಮಗಳೇನು; | ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ, ತುಮಕೂರು ರವರ ಪತ್ರ ಸಂಖ್ಯೆ:ವಿ.ಭೂ.ಸ್ವಾ.ಅ/ಕೆ.ಐ.ಎ.ಡಿ.ಬಿ/ತು/ಸಿಎಂ ನಂ.2996/2019-20, ದಿನಾಂಕ:28.11.2019ರಂತೆ ಹುಂಜನಾಳು ಗ್ರಾಮದ ಸ.ನಂ.14, 26,31,32,33,36,43,44,50,54,56,57,58,59,62,63,66,68, 70,102,115,314,318,378,382 ಮತ್ತು ಸಿಬಿ ಗ್ರಾಮದ ಸ.ನಂ.2/6,44/3ಬಿ, 147,148,149,150,151,152,153,165 ಹಾಗೂ ಬೋರಸಂದ್ರ ಗ್ರಾಮದ ಸ.ನಂ.9,22,25,34,49/1 ಈ ಸರ್ವೆ ನಂಬರುಗಳು ಭೂಸ್ವಾಧೀನವಾಗಿದ್ದು, ತಹಶೀಲ್ದಾರ್, ಶಿರಾ ತಾಲ್ಲೂಕು ಕಛೇರಿ ಪತ್ರ ಸಂಖ್ಯೆ:ಎಲ್ಎಕ್ಯೂ:ಸಿಆರ್:14/20-21, ದಿನಾಂಕ:31.08.2020ರಂತೆ ಸಂಬಂಧಿಸಿದ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ. |
| ಇ) | ಕಳ್ಳಂಬೆಳ್ಳ ಹೋಬಳಿಯ ಹುಂಜನಾಳು ಸರ್ವೆ ನಂಬರ್ 212 (ಕಂದಾಯ-ಅರಣ್ಯ) ಸಿಬಿ ಸರ್ವೆ ನಂಬರ್ 144ಕ್ಕೆ (ಕಂದಾಯ-ಒಉಂಖ) ಸಂಬಂಧಿಸಿದಂತೆ ರೆವಿನ್ಯೂ ಸ್ಕೆಚ್‌ನ ವಿವರ ಒಗಿಸುವುದು; | ಕಳ್ಳಂಬೆಳ್ಳ ಹೋಬಳಿಯ ಹುಂಜನಾಳು ಸರ್ವೆ ನಂಬರ್ 212 (ಕಂದಾಯ-ಅರಣ್ಯ) ಸಿಬಿ ಸರ್ವೆ ನಂಬರ್ 144ರ ಜಮೀನಿಗೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದ ನಕ್ಷೆ ತಯಾರಿಸಿರುವುದಿಲ್ಲ.<br><br>ಉಪ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ) ತುಮಕೂರು ವಿಭಾಗ, ಇವರು ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಕಳ್ಳಂಬೆಳ್ಳ ಹೋಬಳಿ, ಹುಂಜನಾಳು ಗ್ರಾಮದ ಸ.ನಂ.212ರಲ್ಲಿ ವಿಸ್ತೀರ್ಣ 59-10 ಎಕರೆ/ಗುಂಟೆ ಹಾಗೂ ಸಿಬಿ ಗ್ರಾಮದ ಸ.ನಂ.144ರಲ್ಲಿ ಒಟ್ಟು 112-27 ಎಕರೆ/ಗುಂಟೆ ವಿಸ್ತೀರ್ಣವು |

| | | |
|---|---|---|
| | | ಅಧಿಸೂಚನೆ ಸಂಖ್ಯೆ:ಆರ್11825-ಎಫ್‌ಟಿ-134-17-7, ದಿನಾಂಕ:06.06.1918ರಲ್ಲಿ ಅಧಿಸೂಚಿಸಲ್ಪಟ್ಟಿರುವ "ಅಂಕಸಂದ್ರ ಮೀಸಲು ಅರಣ್ಯ" ಪ್ರದೇಶಕ್ಕೆ ಸೇರಿರುತ್ತೆಂದು ತಿಳಿಸಿರುತ್ತಾರೆ.<br><br>2021-22ನೇ ಪಹಣಿ ದಾಖಲೆಯಂತೆ ಹುಂಜನಾಳು ಗ್ರಾಮದ ಸ.ನಂ.212ರಲ್ಲಿ ಒಟ್ಟು ವಿಸ್ತೀರ್ಣ 64.05 ಎಕರೆ/ಗುಂಟೆ ಇದ್ದು, ಈ ಪೈಕಿ ಖರಾಬು ವಿಸ್ತೀರ್ಣ 48-35 ಎಕರೆ/ಗುಂಟೆ ಇದ್ದು, ಅರಣ್ಯ ಇಲಾಖೆಗೆ ವಿಸ್ತೀರ್ಣ 15-10 ಎಕರೆ/ಗುಂಟೆ ನಮೂದಾಗಿರುತ್ತದೆ.<br><br>2021-22ನೇ ಪಹಣಿ ದಾಖಲೆಯಂತೆ ಸೀಬಿ ಗ್ರಾಮದ ಸ.ನಂ.144 "ಸರ್ಕಾರಿ ಗೋಮಾಳ" ವಿಸ್ತೀರ್ಣ 102.18 ಎಕರೆ/ಗುಂಟೆ ಇದ್ದು, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ NH4 ದಾವಣಗೆರೆಗೆ ವಿಸ್ತೀರ್ಣ 5-09 ಎಕರೆ/ಗುಂಟೆ ಜಮೀನು ಭೂ ಸ್ವಾಧೀನವಾಗಿರುತ್ತದೆ. ಸೀಬಿ ಗ್ರಾಮದ ಸ.ನಂ.144ರಲ್ಲಿ ಅರಣ್ಯ ಇಲಾಖೆಗೆ ಯಾವುದೂ ನಮೂದು ಇರುವುದಿಲ್ಲ. |
| ಈ) | ಕಳೆದ ಅಧಿವೇಶನದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಸಂಖ್ಯೆ:388(434)ಗೆ ತಪ್ಪು ಉತ್ತರ ನೀಡಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ? (ವಿವರ ನೀಡುವುದು) | ಕಳೆದ ಅಧಿವೇಶನದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಸಂಖ್ಯೆ:388(434)ಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಉಪ ಸಂರಕ್ಷಣಾಧಿಕಾರಿಗಳು, ತುಮಕೂರು ವಿಭಾಗ, ತುಮಕೂರು ಹಾಗೂ ತಹಶೀಲ್ದಾರ್, ಶಿರಾ ತಾಲ್ಲೂಕು, ಶಿರಾ ಇವರುಗಳು ಸಲ್ಲಿಸಿರುವ ವರದಿಯಂತೆ ಉತ್ತರ ಸರಿಯಾಗಿರುತ್ತದೆಂದು ಜಿಲ್ಲಾಧಿಕಾರಿಗಳು, ತುಮಕೂರು ರವರು ತಿಳಿಸಿರುವುದರಿಂದ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಆರ್‌ಡಿ 63 ಎಲ್‌ಜಿಟಿ 2021**

**(ಆರ್.ಅಶೋಕ್)**

**ಕಂದಾಯ ಸಚಿವರು**